# ಗಿಳಿಯು ಪಂಜರದೊಳಿಲ್ಲಾ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 83.
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 180.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 216.
4. **Note:** The lyrics in Ref. 2 are marked in yellow highlights.
5. **Note:** The lyrics without highlights are as per Ref. 3. These lyrics are also popular and many singers have sung it. Here, singer has followed lyrics as in Ref. 3 (without highlights).
6. **Note:** The lyrics as in Ref. 1 are slightly different and are given in green highlights.

ರಾಗ: ಆನಂದ ಭೈರವಿ ತಾಳ: ಆದಿ

| | |
|---|---|
| ಗಿಳಿಯು ಪಂಜರದೊಳಿಲ್ಲಾ ಹರಿ ಹರಿಯೇ | ಗಿಳಿಯು ಪಂಜರದೊಳಿಲ್ಲಾ |
| ಬರಿ ಪಂಜರವಾಯಿತಲ್ಲಾ ‖ ಪ ‖ | ಶ್ರೀ ರಾಮ ರಾಮಾ ಬರಿದೆ ಪಂಜರವಾಯ್ತಲ್ಲ |
| | |
| ಅಕ್ಕ ಕೇಳೇ ಎನ್ನ ಮಾತು | ಅಕ್ಕ ನಿನ್ನ ಮಾತ ಕೇಳಿ |
| ಚಿಕ್ಕದೊಂದು ಗಿಳಿಯ ಸಾಕಿದೆ | ಚಿಕ್ಕದೊಂದು ಗಿಳಿಯ ಸಾಕಿದೆ |
| ಅಕ್ಕ ನಾನಿಲ್ಲದ ವೇಳೆ | ಅಕ್ಕ ನಾನಿಲ್ಲದ ವೇಳೆ |
| ಬೆಕ್ಕು ಕೊಂಡು ಹೋಯಿತಯ್ಯೋ ‖ ೧ ‖ | ಬೆಕ್ಕು ಕೊಂಡು ಹೋಯಿತಯ್ಯೋ |
| | |
| ಅರ್ಥಿಲೊಂದು ಗಿಳಿಯ ಸಾಕಿ | ಅರ್ಥಿಗೊಂದು ಗಿಳಿಯ ಸಾಕಿದೆ |
| ಮುತ್ತಿನ್ಹಾರವನ್ನು ಹಾಕಿದೆ | ಮುತ್ತಿನ ಹಾರವ ಹಾಕಿದೆ |
| ಮುತ್ತಿನಹಾರ ಕೊಂಡು ಗಿಳಿಯು | ಮುತ್ತು ಕೊಂಡು ಗಿಳಿಯು ತಾನು |
| ಎತ್ತಲ್ಹಾರಿ ಹೋಯಿತಯ್ಯೋ ‖ ೨ ‖ | ಎತ್ತಲೋಡಿ ಹೋಯಿತಯ್ಯೋ |

| | |
|---|---|
| ಹಸುರು ಬಣ್ಣದ ಗಿಳಿಯು | ಹಸುರು ಬಣ್ಣದ ಗಿಳಿಯು |
| ಕುಶಲ ಬುದ್ಧಿಯ ಗಿಳಿಯು | ಕುಶಲ ಬುದ್ಧಿಯ ಗಿಳಿಯು |
| ಅಸುವು ಗುಂದಿ ಮರಿಯು ತಾನು | ಅಸುವ ಕುಂದಿ ಗಿಳಿಯು ತಾನು |
| ಹಸನಗೆಡಿಸಿ ಹೋಯಿತಯ್ಯೋ    \|\| ೩ \|\| | ಹಸನಗೆಡಿಸಿ ಹೋಯಿತಯ್ಯೋ |
| | |
| ರಾಮ ರಾಮ ಎಂಬ ಗಿಳಿ | ಮುಪ್ಪಾಗದ ಬೆಣ್ಣೆಯನ್ನು |
| ಕೋಮಲ ಕಾಯದ ಗಿಳಿ | ತಪ್ಪದೇ ನಾ ಹಾಕಿ ಸಾಕಿದೆ |
| ಸಾಮಜ ಪೋಷಕ ತನ್ನ | ಒಪ್ಪದಿಂದ ಗಿಳಿಯು ಈಗ |
| ಪ್ರೇಮದಿ ಸಾಕಿದ ಗಿಳಿ    \|\| ೪ \|\| | ತೆಪ್ಪನೇ ಹಾರಿ ಹೋಯಿತಯ್ಯೋ |
| | |
| ಒಂಬತ್ತು ಬಾಗಿಲ ಮನೆಯೊಳ್ | ರಾಮ ರಾಮ ಎಂಬೋ ಗಿಳಿ |
| ತುಂಬಿದ ಸಂದಣಿಯಿರಲು | ಕೋಮಲ ಕಾಯದ ಗಿಳಿ |
| ಕುಂಭ ಮುರಿದು ಡಿಂಭ ಬಿದ್ದು | ಸಾಮಜ ಪೋಷಕ ತಾನು |
| ಅಂಬರಕೆ ಹಾರಿ ಹೋಯಿತು    \|\| ೫ \|\| | ಪ್ರೇಮದಿ ಸಾಕಿದ ಗಿಳಿ |
| | |
| ಮುಪ್ಪಾಗದ ಬೆಣ್ಣೆ ತಿಂದು | ಒಂಬತ್ತು ಬಾಗಿಲ ಮನೆ |
| ತಪ್ಪದೇ ಹಾಕಿದ ಹಾಲ | ತುಂಬಿದ ಸಂದಣಿಯಿರಲು |
| ಒಪ್ಪದಿಂದ ಕುಡಿದು ಕೈ | ಕಂಭ ಮುರಿದು ಡಿಂಭ ಬಿದ್ದು |
| ತಪ್ಪಿ ಹಾರಿ ಹೋಯಿತಯ್ಯೋ    \|\| ೬ \|\| | ಅಂಬರಕೆ ಹಾರಿ ಹೋಯಿತು |
| | |
| ಅಂಗೈಯಲಾಡುವ ಗಿಳಿ | ಅಂಗೈಯಲಾಡುವ ಗಿಳಿ |
| ಮುಂಗೈಯ ಮೇಲಣ ಗಿಳಿ | ಮುಂಗೈಯ ಮೇಲಣ ಗಿಳಿ |
| ರಂಗ ಪುರಂದರ ವಿಠ್ಠಲನ್ನ | ರಂಗ ಪುರಂದರ ವಿಠಲನ |
| ಅಂಗಣದೊಳಾಡುವ ಗಿಳಿ    \|\| ೭ \|\| | ಅಂತರಂಗದಿ ಭಜಿಸುವ ಗಿಳಿ |

**Note:** The lyrics from the book in Ref. 1 above are slightly different. They are given green highlights.

ರಾಗ: ನೀಲಾಂಬರಿ      ತಾಳ: ಅಟ್ಟ

ಗಿಳಿಯು ಪಂಜರದೊಳಿಲ್ಲ  
ಶ್ರೀ ರಾಮ ರಾಮಾ ಗಿಳಿಯು ಪಂಜರದೊಳಿಲ್ಲ    || ಪ ||

ಅಕ್ಕ ಕೇಳೇ ಎನ್ನ ಮಾತು
ಚಿಕ್ಕದೊಂದು ಗಿಳಿಯ ಸಾಕಿದೆ
ಅಕ್ಕ ನಾನಿಲ್ಲದ ವೇಳೆ
ಬೆಕ್ಕು ಕೊಂಡು ಹೋಯಿತಯ್ಯೋ || ೧ ||

ಅರ್ತಿಗೊಂದು ಗಿಳಿಯ ಸಾಕಿದೆ
ಮುತ್ತಿನ ಹಾರವನ ಹಾಕಿದೆ
ಮುತ್ತಿನಂಥ ಗಿಳಿಯು ತಾನು
ಎತ್ತ ಹಾರಿ ಹೋಯಿತಯ್ಯೋ || ೨ ||

ಹಸಿರು ಬಣ್ಣದ ಗಿಳಿಯು
ಕುಶಲ ಬುದ್ಧಿಯ ಗಿಳಿಯು
ಹಸಗುಂದಿ ಗಿಳಿಯು ತಾ
ಮೋಸಮಾಡಿ ಹೋಯಿತಯ್ಯೋ || ೩ ||

ಮುಪ್ಪಾಗದ ಬೆಣ್ಣೆಯ
ತಪ್ಪದೇ ಹಾಕಿದೆ ಹಾಲು
ಒಪ್ಪದಿಂದ ಕುಡಿದು ತಾನು
ಗಪ್ಪನೆ ಹಾರಿ ಹೋಯಿತಯ್ಯೋ || ೪ ||

ಒಂಬತ್ತು ಬಾಗಿಲ ಮನೆಯು
ತುಂಬಿದ ಸಂದಣಿ ಇರಲು
ಕಂಬ ಮುರಿದು ಡಿಂಬ ಬಿದ್ದು
ಅಂಬರಕಡರಿ ಹೋಯಿತಯ್ಯೋ || ೫ ||

ರಾಮ ರಾಮ ಎಂಬ ಗಿಳಿಯು
ಕೋಮಲ ಕಾಯದ ಗಿಳಿಯು
ಸಾಮಜ ಪೋಷಕ ತಾನು
ಪ್ರೇಮದಿ ಸಾಕಿದ ಗಿಳಿಯು || ೬ ||

ಅಂಗೈಯಲಾಡುವ ಗಿಳಿಯು

ಮುಂಗೈಯ ಮೇಲಿನ ಗಿಳಿಯು
ರಂಗ ಪುರಂದರ ವಿಠಲನಂತ
ರಂಗದೊಳಿಹ ಗಿಳಿಯು || ೭ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಪುರಂದರ ದಾಸರ ಮಗನೊಬ್ಬನು ಅವರ ಕಣ್ಣೆದುರಿಗೇ ತೀರಿಕೊಂಡನೆಂದೂ, ಈ ಸಂಕಟದಿಂದ ಈ ಹಾಡು ಹೊರಬಂದಿತೆಂದೂ ಪ್ರತೀತಿ.

**ಅರ್ಥಿಲಿ** – ಪ್ರೀತಿಯಿಂದ.

**ಅಸುವು ಗುಂದಿ** – ಪ್ರಾಣವನ್ನು ಕಳೆದುಕೊಂಡು.

**ಹಸನಗೆಡಿಸಿ** – ನನ್ನ ಸುಖವನ್ನು ಹಾಳು ಮಾಡಿ.

**ಸಾಮಜ ಪೋಷಕ** – ಗಜೇಂದ್ರುನಿಗೆ ಸಹಾಯಮಾಡಿದ ಹರಿ.

**ಒಂಭತ್ತು ಬಾಗಿಲ ಮನೆಯೊಳ್** – ಒಂಬತ್ತು ಛಿದ್ರಗಳಿರುವ ಶರೀರ ('ನವದ್ವಾರೇ ಪುರೇ').

**ಡಿಂಬ** – ಈ ಮಾತಿಗೆ ಮೊಟ್ಟೆ, ಮಗು (ಡಿಂಭ) ಎಂಬರ್ಥಗಳಿವೆ. ಆದರೆ ಈ ಸಂದರ್ಭದಲ್ಲಿ ಮನೆಯೆಂದು ಅರ್ಥಮಾಡಿದರೆ ಒಪ್ಪುತ್ತದೆ. ಡಿಂಬವೆಂದರೆ ದೇಹವೂ ಆಗುತ್ತದೆ.

**Classification:** Mundige
**Ankita:** purandara vittala
**Location:** NA
**Category:** jeevana darshana
**Sub-Category:** gili, rama, benne, prema, akasha, ranga, bhajane, bekku, muttu, buddi, muppu, bagilu,
**Pravachana:** NA
**Explanation:** NA